***ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 13.02.2026***

***ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ***

1. ನಿಡಿ.7 ನಾನು ಶಾಲೆಗೆ ಸೇರಿರುವ ದಾಖಲೆ. ದಿಃ 27.11.2025 ರಂದು ನಾನು ಒದಿಲ್ಲ ಎಂದು ನ್ಯಾಯಾಲಯದ ಮುಂದೆ ಸುಳ್ಳು ಹೇಳಿರುತ್ತೀರಾ ಎಂದರೆ ಸರಿಯಲ್ಲ. ನಿಮ್ಮ ತಂದೆ ಬದುಕಿದ್ದ ಕಾಲದಲ್ಲಿ ಕೆ ಆರ್ ಪೇಟೆ ತಾಲ್ಲೂಕು ಮೋದೂರಿನಲ್ಲಿ ವಾಸ ಇರುತ್ತೀರಾ ಎಂದರೆ ಸಾಕ್ಷಿ ನಾನು ಬಬ್ಬನೇ ವಾಸ ಇದ್ದೆ ಎಂದು ಹೇಳುತ್ತಾರೆ. ನಿಮ್ಮ ಹಿಡಿ ಕುಟುಂಬದ ಮೋದೂರು ಗ್ರಾಮದಲ್ಲಿ ವಾಸ ಇದ್ದರು ಇರಲಿಲ್ಲ ಎಂದು ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. 1979-80 ನೇ ಸಾಲಿನಲ್ಲಿ ನಿಮಗೆ 18 ವರ್ಷ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ನಿಮ್ಮ ಕುಟುಂಬಕ್ಕೆ ಮೋದೂರು ಗ್ರಾಮದ ಸರ್ವೆ ನಂಃ 32/8 ರಲ್ಲಿ 8 ಗುಂಟೆ ಆಸ್ತಿ ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ. 8 ಗುಂಟೆ ಆಸ್ತಿ ಇರುವ ಬಗ್ಗೆ ನಿಮಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.

2. ಮೋದೂರಿನಲ್ಲಿದ್ದ 8 ಗುಂಟೆ ಆಸ್ತಿಯನ್ನು ನೀವು ಮತ್ತು ನಿಮ್ಮ ತಮ್ಮ ಅಪ್ರಾಪ್ತರಿದ್ದಾಗ ನಿಮ್ಮ ತಾಯಿ ಸಣ್ಣಮ್ಮನವರು ಆಳಶೆಟ್ಟಿ ಬಿನ್ ಗುಂಡಶೆಟ್ಟಿರವರಿಗೆ 1979-80 ನೇ ಸಾಲಿನಲ್ಲಿ ಮಾರಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಅದೇ ವರ್ಷ

*ಅಂದರೆ 1979-80 ನೇ ಸಾಲಿನಲ್ಲಿ ಐಟಂ 2ರ ಆಸ್ತಿ ನಿಮ್ಮ ಹೆಸರಿಗೆ ಕ್ರಯವಾಗಿದೆ ಎಂದರೆ ಸರಿ. ದಾವಾ ಐಟಂ 2ರ ಆಸ್ತಿಯ ಕ್ರಯ ಒಟ್ಟು ಕುಟುಂಬದ ಪರವಾಗಿ ನಿಮ್ಮ ಹೆಸರಿಗೆ ಆಗಿರುವ ಕ್ರಯ ಎಂದರೆ ಸರಿಯಲ್ಲ. ನಿಡಿ.10ರ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಆ ಆಸ್ತಿಯನ್ನು 1999ರಲ್ಲಿ ಖರೀದಿ ಮಾಡಿರುವುದಾಗಿ ಪತ್ರ ಹಾಜರು ಪಡಿಸಿರುತ್ತೀರಾ ಎಂದರೆ ಸರಿ. ಆಳಶೆಟ್ಟಿ ನನ್ನ ಸೋದರ ಮಾವ. ಮೋದೂರಿನಲ್ಲಿದ್ದ ಜಮೀನನ್ನು ನಿಮ್ಮ ತಾಯಿ ನಿಮ್ಮ ಸೋದರ ಮಾವನಿಗೆ ಮಾಡಿದ ವಿಚಾರ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ. ಪ್ರಸ್ತುತ ನೀವು ಬೇಬಿ ಗ್ರಾಮದಲ್ಲಿ ವಾಸ ಇರುತ್ತೀರಾ ಎಂದರೆ ಸರಿ. 1979-80ರ ನಂತರ ಮೋದೂರು ಗ್ರಾಮ ಬಿಟ್ಟು ನಿಮ್ಮ ಕುಟುಂಬದ ಬೇಬಿ ಗ್ರಾಮದಲ್ಲಿ ವಾಸವಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಈಗ್ಗೆ 8 ವರ್ಷದ ಹಿಂದೆ ಬೇಬಿ ಗ್ರಾಮಕ್ಕೆ ಬಂದು ಸೇರಿಕೊಂಡಿದ್ದೇವೆಂದು ಹೇಳುತ್ತಾರೆ. ನಿಡಿ.6 ನೀವು ಮೋದೂರಿನಲ್ಲಿದ್ದಾಗ ಮಾಡಿಸಿಕೊಂಡ ದಾಖಲೆ ಎಂದರೆ ಸರಿ.*

***ಮರು ವಿಚಾರಣೆ ಇಲ್ಲ.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***